**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ. 118/2019**

ಪ್ರಾ.ಸಾ. 19

ಹೆಚ್ಚುವರಿ ಸಾಕ್ಷಿ–02

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 08.04.2026**

ಸಾಕ್ಷಿದಾರರ ಹೆಸರು ಪರಮೇಶ್.ಬಿ.ಸಿ.

ತಂದೆಯ ಹೆಸರು ಚಿಕ್ಕರುದ್ರಯ್ಯ

ವಯಸ್ಸು 46 ವರ್ಷ

ಉದ್ಯೋಗ ಸಿವಿಲ್ ಹೆಡ್ ಕಾನ್ಸ್‌ಸ್ಟೇಬಲ್, ಸಿಐಡಿ, ಬೆಂಗಳೂರು

ವಾಸ ಬೆಂಗಳೂರು

**ಮುಖ್ಯ ವಿಚಾರಣೆಃ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರವರಿಂದಃ**

.1. ನಾನು 2013 ರಿಂದ 2017 ರವರೆಗೆ ಪೊಲೀಸ್ ಪೇದೆಯಾಗಿ ಮತ್ತು 2017 ರಿಂದ ಇಲ್ಲಿಯವರೆಗೆ ಮುಖ್ಯ ಪೇದೆಯಾಗಿ ಸಿಐಡಿ ಕೇಂದ್ರ ಕಛೇರಿಯಲ್ಲಿ ವಿಶೇಷ ವಿಚಾರಣಾ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

.

.2. ಚಾಸಾ.40 ರವರು ಸಿಐಡಿಯಲ್ಲಿ ಡಿ ವೈ ಎಸ್ ಪಿಯಾಗಿ ಎರಡು ವರ್ಷ 2017 ರಿಂದ 2019 ರವರೆಗೆ ಕರ್ತವ್ಯದಲ್ಲಿದ್ದರು. ಅವರು ಸಿಐಡಿಯಿಂದ ವರ್ಗಾವಣೆಗೊಂಡು ಚಿತ್ರದುರ್ಗದಲ್ಲಿ ಕರ್ತವ್ಯದಲ್ಲಿ ಇರುವಾಗಲೇ ಮೂರು ವರ್ಷಗಳ ಹಿಂದೆ ಮರಣ ಹೊಂದಿದ್ದಾರೆ ಎಂದು ತಿಳಿಯಿತು. ಈ ಹಂತದಲ್ಲಿ ಮದ್ದೂರು ಠಾಣಾ ಪೊಲೀಸರು ವರದಿಯೊಂದಿಗೆ ಹಾಜರುಪಡಿಸಿದ ಚಾಸಾ.40 ರವರದ್ದು ಎಂದು ಹೇಳಲಾದ ಮರಣ ಪ್ರಮಾಣ ಪತ್ರವನ್ನು ಸಾಕ್ಷಿ

ನೋಡಿ ಚಾಸಾ.40 ರವರ ಮರಣ ಪ್ರಮಾಣಪತ್ರ ಎಂದು ಗುರುತಿಸಿದ ಕಾರಣ ಅದನ್ನು ನಿಪಿ.36 ಎಂದು ಗುರುತಿಸಲಾಯಿತು. ಚಾಸಾ.40 ರವರು ಸಿಐಡಿಯಲ್ಲಿ ಕರ್ತವ್ಯದಲ್ಲಿದ್ದಾಗ ನಾನು ಅವರಿಗೆ ತನಿಖಾ ಸಹಾಯಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಚಾಸಾ.40 ರವರು ಮದ್ದೂರು ಪೊಲೀಸ್ ಠಾಣಾ ಮೊಕದ್ದಮೆ ಸಂಖ್ಯೆ 584/2016 ರ ತನಿಖಾಧಿಕಾರಿಗಳಾಗಿದ್ದರು ಮತ್ತು ಆ ಸಮಯದಲ್ಲಿ ನಾನು ಅವರಿಗೆ ತನಿಖಾ ಸಹಾಯಕನಾಗಿದ್ದೆ. ಅವರು ಈ ಪ್ರಕರಣದಲ್ಲಿ ತನಿಖೆ ಮಾಡಿದ ವಿಚಾರ ನನಗೆ ಗೊತ್ತು.

.

.3. ಮೊಕದ್ದಮೆ ಸಂಖ್ಯೆ 584/2016 ರ ಕಡತ ಸರ್ಕಾರದ ಆದೇಶದ ಬಳಿಕ ಪೊಲೀಸ್ ಮಹಾನಿರ್ದೇಶಕರ ಆದೇಶದಂತೆ ಮದ್ದೂರು ಠಾಣೆಯಿಂದ ದಿನಾಂಕ 20.03.2017 ರಂದು ಸಿಐಡಿಗೆ ವರ್ಗಾವಣೆಯಾಗಿರುತ್ತದೆ. ಬಳಿಕ ಚಾಸಾ.40 ರವರು ಪ್ರಕರಣದ ಕಡತವನ್ನು ಚಾಸಾ.39 ರವರಿಂದ ಪಡೆದುಕೊಂಡಿರುತ್ತಾರೆ. ಅದೇ ದಿನ ಸಿಐಡಿಯಿಂದ ತನಿಖೆಯನ್ನು ಕೈಗೊಳ್ಳಲಾಗಿದೆ ಎಂದು ಚಾಸಾ.40 ರವರು ನ್ಯಾಯಾಲಯಕ್ಕೆ ಮಾಹಿತಿ ನೀಡಿದ್ದಾರೆ. ಚಾಸಾ.40 ರವರು ಈ ಪ್ರಕರಣದಲ್ಲಿ ಕೆಲವೊಂದು ಸಾಕ್ಷಿದಾರರಿಗೆ ನೋಟಿಸು ನೀಡಿ ಅವರ ವಿಚಾರಣೆ ಮಾಡಿ, ತನಿಖೆ ನಡೆಸಿ ಅಂತಿಮ ವರದಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ. ಚಾಸಾ.40 ರವರು ಚಾಸಾ.1 ಮತ್ತು ಚಾಸಾ.13 ಜಗದೀಶ ಅಲಿಯಾಸ್ ಕೋಳಿ ಜಗದೀಶ ರವರ ಹೇಳಿಕೆಗಳನ್ನು ಅವರು ನ್ಯಾಯಾಂಗ ಬಂಧನದಲ್ಲಿದ್ದಾಗಲೇ ದಾಖಲಿಸಿಕೊಂಡಿದ್ದಾರೆ. ಚಾಸಾ.40 ರವರು ನಿಪಿ.5 ರಿಂದ ನಿಪಿ.13 ಸಿಡಿಆರ್ ಮತ್ತು ನಿಪಿ.19 ರಿಂದ ನಿಪಿ.22 ಎಂಎಲ್‌ಸಿ ರಿಜಿಸ್ಟರ್ ಮತ್ತು ಗಾಯದ ಪ್ರಮಾಣಪತ್ರಗಳನ್ನು ಸಂಬಂಧಿಸಿದ ಸಂಸ್ಥೆಗಳಿಂದ ತನಿಖೆಯ ವೇಳೆಯಲ್ಲಿ ಪಡೆದು, ಅಂತಿಮ ವರದಿಯ ಜೊತೆ ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ. ಅವರು ಅಂತಿಮ ವರದಿಯನ್ನು ಸಲ್ಲಿಸಿದ್ದು ಅದರಲ್ಲಿ ತಮ್ಮ ಸಹಿಯನ್ನೂ ಕೂಡ ಮಾಡಿದ್ದಾರೆ. ಅವರು ಹಾಕಿದ ಅಂತಿಮ ವರದಿಯನ್ನು ನಾನು ಗುರುತಿಸಬಲ್ಲೆ. ಸಾಕ್ಷಿ ಈ ಪ್ರಕರಣದಲ್ಲಿ ಸಲ್ಲಿಸಿದ ಅಂತಿಮ ವರದಿಯನ್ನು ನೋಡಿ ಚಾಸಾ.40 ರವರು ಸಲ್ಲಿಸಿದ ಅಂತಿಮ ವರದಿ ಎಂದು ಗುರುತಿಸಿ, ಕೊನೆಯ ಪುಟದಲ್ಲಿರುವ ಸಹಿಯನ್ನು ಗುರುತಿಸಿ, ಚಾಸಾ.40 ರವರ ಸಹಿ ಎಂದು ಗುರುತಿಸಿದ ಕಾರಣ

ಸಂಪೂರ್ಣ ಅಂತಿಮ ವರದಿಯನ್ನು ನಿಪಿ.37 ಎಂದು ಗುರುತಿಸಲಾಯಿತು. ಚಾಸಾ.40 ರವರ ಸಹಿಯನ್ನು 37 ಎ ಎಂದು ಗುರುತಿಸಲಾಯಿತು.

.

**ಪಾಟೀ ಸವಾಲುಃ *1* ರಿಂದ *3* ನೇ ಆರೋಪಿತರ ಪರ ಶ್ರೀ ವಿ ಎಸ್ ಭಟ್ ವಕೀಲರಿಂದಃ**

1. ಈ ಪ್ರಕರಣದ ತನಿಖಾಧಿಕಾರಿ ಚಾಸಾ.40 ರವರು ಎಲ್ಲಾ ಸಾಕ್ಷಿದಾರರಾದ ಹೇಳಿಕೆಗಳನ್ನು ದಾಖಲಿಸುವ ಕಾಲಕ್ಕೆ ನಾನು ಅವರ ಜೊತೆಗೆ ಇದ್ದೆ ಎಂದರೆ ಸರಿ. ಈ ಪ್ರಕರಣದ ತನಿಖೆಯನ್ನು ಚಾಸಾ.40 ರವರು ಕೈಗೊಳ್ಳುವ ವೇಳೆಗೆ ಮದ್ದೂರು ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 582/2016 ಕೂಡ ದಾಖಲು ಆಗಿತ್ತು ಎನ್ನುವ ವಿಚಾರ ತನಿಖಾಧಿಕಾರಿಯವರ ಗಮನದಲ್ಲಿತ್ತು ಎನ್ನುವ ವಿಚಾರ ನನಗೆ ತಿಳಿಸಿದ್ದಾರೆ. ಈ ಪ್ರಕರಣದ ಅಂತಿಮ ವರದಿಯನ್ನು ಸಲ್ಲಿಸುವ ಮೊದಲೇ ಮೊಕದ್ದಮೆ ಸಂಖ್ಯೆ 582/2016 ರಲ್ಲಿ ಸಿಐಡಿಯ ಡಿ ವೈ ಎಸ್ ಪಿ ಬಸಂತ್ ಕುಮಾರ್ ಎಂಬುವವರು ಅಂತಿಮ ವರದಿಯನ್ನು ಸಲ್ಲಿಸಿದ್ದರು ಎನ್ನುವ ವಿಚಾರ ಕೂಡ ಚಾಸಾ.40 ರವರ ಗಮನದಲ್ಲಿ ಇದ್ದಿರಬಹುದು. ಈ ಪ್ರಕರಣದ ತನಿಖೆಯ ಸಂದರ್ಭದಲ್ಲಿ ಮೊಕದ್ದಮೆ ಸಂಖ್ಯೆ 582/2016 ಮತ್ತು ಮೊಕದ್ದಮೆ ಸಂಖ್ಯೆ 584/2016 ಗಳು ಪ್ರಕರಣ ಮತ್ತು ಪ್ರತಿ ಪ್ರಕರಣಗಳು ಎನ್ನುವ ಅಂಶ ನನ್ನ ಗಮನಕ್ಕೆ ಬಂದಿದೆ. ತನಿಖಾಧಿಕಾರಿಗಳು ಎರಡೂ ಪ್ರಕರಣಗಳನ್ನು ಒಬ್ಬರೇ ತನಿಖೆ ನಡೆಸಬೇಕು ಎನ್ನುವ ಬಗ್ಗೆ ಇಲಾಖಾ ಮುಖ್ಯಸ್ಥರಿಗೆ ಕೇಳಿಕೊಂಡ ವಿಚಾರ ನನ್ನ ಗಮನದಲ್ಲಿ ಇಲ್ಲ. ನನಗೆ ಈಗ ತೋರಿಸುತ್ತಿರುವ ದಿನಾಂಕ 21.06.2013 ರ ಸುತ್ತೋಲೆಯ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ನಮ್ಮ ತನಿಖಾಧಿಕಾರಿಗಳಿಗೆ ಗೊತ್ತಿರಬಹುದು. ಈಗ ನಾನು ನಿಡಿ.1, ನಿಡಿ.5 ಮತ್ತು ನಿಡಿ.6 ಹೇಳಿಕೆಗಳನ್ನು ನೋಡುತ್ತಿದ್ದು ಅದರಲ್ಲಿರುವ ಸಹಿ ಚಾಸಾ.40 ತನಿಖಾಧಿಕಾರಿಗಳದ್ದು. ಸಾಕ್ಷಿ ನಿಡಿ.1, ನಿಡಿ.5 ಮತ್ತು ನಿಡಿ.6 ರಲ್ಲಿ ಚಾಸಾ.40 ರವರ ಸಹಿ ನೋಡಿ ಗುರುತಿಸಿದ್ದು ಅದನ್ನು ಕ್ರಮವಾಗಿ ನಿಡಿ.1 ಎ, ನಿಡಿ.5 ಎ ಮತ್ತು ನಿಡಿ.6 ಎ ಎಂದು ಗುರುತಿಸಲಾಯಿತು. ಸದರಿ ನಿಡಿ.1, ನಿಡಿ.5 ಮತ್ತು ನಿಡಿ.6 ಹೇಳಿಕೆಗಳನ್ನು ತನಿಖಾಧಿಕಾರಿಗಳು ನನಗೆ ಉಕ್ತಲೇಖನ ಕೊಟ್ಟು ನನ್ನ ಕೈಯಲ್ಲಿ ಬೆರಳಚ್ಚು ಮಾಡಿಸಿದ್ದಾರೆ. ನಿಡಿ.1, ನಿಡಿ.5 ಮತ್ತು ನಿಡಿ.6 ರಲ್ಲಿ ಗುರುತಿಸಿದ ನಿಡಿ.1 ರಲ್ಲಿ ಗುರುತಿಸಿದ ಅಂಶ, ನಿಡಿ.5 ರಲ್ಲಿ ಗುರುತಿಸಿದ ಅಂಶ ಮತ್ತು ನಿಡಿ.6 ರಲ್ಲಿ ಗುರುತಿಸಿದ ಅಂಶಗಳನ್ನೂ ಕೂಡ ತನಿಖಾಧಿಕಾರಿಗಳು

ನನಗೆ ಉಕ್ತಲೇಖನ ಕೊಟ್ಟು, ಬೆರಳಚ್ಚು ಮಾಡಿಸಿದ್ದಾರೆ. ಚಾಸಾ.1 ಮತ್ತು ಚಾಸಾ.2 ರವರ ಗಾಯದ ಪ್ರಮಾಣಪತ್ರಗಳನ್ನು ತನಿಖಾಧಿಕಾರಿಯವರೇ ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡಿದ್ದಾರೆ, ಆಗ ನಾನು ಅವರ ಜೊತೆ ಹೋಗಿದ್ದೇನೆ. ಚಾಸಾ.1 ರಿಂದ ಚಾಸಾ.5, ಚಾಸಾ.8, ಚಾಸಾ.10, ಚಾಸಾ.12 ರಿಂದ ಚಾಸಾ.14 ಮತ್ತು ಚಾಸಾ.24 ರವರು ನ್ಯಾಯಾಂಗ ಬಂಧನದಲ್ಲಿದ್ದಾಗ ಅವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದಾರೆ ಎಂದರೆ ಚಾಸಾ.1, ಚಾಸಾ.13 ರವರು ಮಾತ್ರ ನ್ಯಾಯಾಂಗ ಬಂಧನದಲ್ಲಿದ್ದರು ಎಂದು ನುಡಿಯುತ್ತಾರೆ. ತನಿಖಾಧಿಕಾಯವರು ಹೇಳಿದ ಪ್ರಕಾರ ಸದರಿ ಚಾಸಾ.1 ಮತ್ತು ಚಾಸಾ.13 ರವರು ಮೊಕದ್ದಮೆ ಸಂಖ್ಯೆ 582/2016 ರಲ್ಲಿ ನ್ಯಾಯಾಂಗ ಬಂಧನದಲ್ಲಿದ್ದರು. ಮೊಕದ್ದಮೆ ಸಂಖ್ಯೆ 582/2016 ರ ತನಿಖಾ ಕಡತವನ್ನು ಚಾಸಾ.40 ರವರು ಪಡೆದು ಪರಿಶೀಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಮೊಕದ್ದಮೆ ಸಂಖ್ಯೆ 582/2016 ರ ಸಂತ್ರಸ್ಥರಲ್ಲಿ ಯಾರು ಯಾರು ಗಾಯಗಳು ಆಗಿದ್ದರು, ಯಾರು ಯಾರು ಮೃತ ಪಟ್ಟಿದ್ದಾರೆ ಎಂದು ಚಾಸಾ.40 ರವರು ಮಾಹಿತಿ ಪಡೆದಿರುತ್ತಾರೆ. ಈ ಪ್ರಕರಣದ ಅಂತಿಮ ವರದಿ ಸಲ್ಲಿಸುವ ಮೊದಲೇ ಮೊಕದ್ದಮೆ ಸಂಖ್ಯೆ 582/2016 ರಲ್ಲಿ ತನಿಖಾಧಿಕಾರಿಯವರು ತನಿಖೆ ಪೂರೈಸಿ, ಅಂತಿಮ ವರದಿ ಸಲ್ಲಿಸಿ ಪ್ರಕರಣ ವಿಚಾರಣೆಯಲ್ಲಿತ್ತು ಎನ್ನುವ ಅಂಶ ತನಿಖಾಧಿಕಾರಿಗೆ ಗೊತ್ತಿರಬಹುದು. ಈ ಪ್ರಕರಣ ಅಂತಿಮ ವರದಿಯ ಜೊತೆಗೆ ಮೊಕದ್ದಮೆ ಸಂಖ್ಯೆ 582/2016 ರ ಅಂತಿಮ ವರದಿಯನ್ನು ಲಗತ್ತಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ.40 ರವರು ನಡೆಸಿದ ತನಿಖೆಯಲ್ಲಿ ಈ ಪ್ರಕರಣ ಪಿರ್ಯಾದುದಾರರು ಮತ್ತು ಸಾಕ್ಷಿಗಳಾದ ಮೊಕದ್ದಮೆ ಸಂಖ್ಯೆ 582/2016 ರ ಆರೋಪಿಗಳೇ ಆಕ್ರಮಣಕಾರರು ಎಂದು ಸಾಬೀತಾದರೂ, ಚಾಸಾ.1 ರವರ ಮತ್ತು ರಾಜಕೀಯ ಒತ್ತಡದಿಂದ ಚಾಸಾ.40 ರವರು ಈ ಪ್ರಕರಣದ ಆರೋಪಿಗಳ ವಿರುದ್ಧ ಸುಳ್ಳು ದೋಷರೋಪಣಾ ಪಟ್ಟಿ ಸಲ್ಲಿಸಿದ್ದಾರೆಂದರೆ ಸರಿಯಲ್ಲ. ಈ ಪ್ರಕರಣದ ಆರೋಪಿಗಳು ಆ ದಿನ ಯಾರ ಮೇಲೂ ಹಲ್ಲೆ ಮಾಡಿಲ್ಲ ಎನ್ನುವುದು ತನಿಖೆಯಿಂದ ಕಂಡು ಬಂದಿತ್ತು ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಗಳ ಜೊತೆ ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದೇನೆ. ಈ ಪ್ರಕರಣದ ಕಲವೊಂದು ಆರೋಪಿಗಳ ಮನೆಗಳು ಕೃತ್ಯ ಸ್ಥಳ ಅರಳೀಕಟ್ಟೆಯು ಆಸುಪಾಸಿನಲ್ಲಿ ಇದೆ ಎನ್ನುವ ವಿಚಾರ ತನಿಖಾಧಿಕಾರಿಗಳ ಗಮನಕ್ಕೆ ಬಂದಿತ್ತು

ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣದ ಪಿರ್ಯಾದುದಾರರು ಮತ್ತು ಸಾಕ್ಷಿದಾರರ ಮನೆಗಳು ಕೃತ್ಯ ಸ್ಥಳದಿಂದ ಊರ ಹೊರಗೆ ಇದೆ ಎನ್ನುವ ವಿಚಾರ ತನಿಖೆಯ ವೇಳೆಯಲ್ಲಿ ತಿಳಿದು ಬಂದಿತ್ತು ಎಂದರೆ ಸರಿ. ಈ ಪ್ರಕರಣದ ಆರೋಪಿಗಳ ಮೇಲೆ ಯಾವುದೇ ಸಾಕ್ಷಿ ಇಲ್ಲದೇ ಇದ್ದರೂ ನಾನು ಮತ್ತು ತನಿಖಾಧಿಕಾರಿಗಳು ಅವರ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಈ ಪ್ರಕರಣದ ಆರೋಪಿಗಳನ್ನು ಚಾಸಾ.40 ರವರು ತನಿಖೆಯ ಸಮಯದಲ್ಲಿ ವಿಚಾರಣೆ ಮಾಡಿದ್ದಾರೆ. ಅವರ ಹೇಳಿಕೆಗಳನ್ನು ತನಿಖಾಧಿಕಾರಿಗಳು ನನಗೆ ಉಕ್ತಲೇಖನ ಕೊಟ್ಟಿದ್ದಾರೆ ಮತ್ತು ನಾನು ಅವುಗಳನ್ನು ಬೆರಳಚ್ಚು ಮಾಡಿದ್ದೇನೆ. ಈ ಪ್ರಕರಣದ ಆರೋಪಿಗಳು ನಮ್ಮ ಮೇಲೆ ಈ ಪ್ರಕರಣ ಸಾಕ್ಷಿಗಳು ಸುಳ್ಳು ಆಪಾದನೆ ಮಾಡಿದ್ದಾರೆ ಎಂದು ಹೇಳಿಕೆ ನೀಡಿದ್ದಾರೆಂದರೆ ನನಗೆ ಗೊತ್ತಿಲ್ಲ.

**ಪಾಟೀ ಸವಾಲುಃ *5, 7* ರಿಂದ *14* ನೇ ಆರೋಪಿತರ ಪರ ಶ್ರೀ ಹೆಚ್ ಎಂ ಎಲ್ ವಕೀಲರಿಂದಃ**

1 ರಿಂದ 3 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.

(ಮರು ವಿಚಾರಣೆಃ ಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.